The Deputy Commissioner, Bidar has been requested to keep strict watch on the scarcity hit villages and to take necessary action to provide drinking water facilities in the scarcity affected villages. The Chief Engineer, Minor Irrigation and PHE (North), has also been requested to cover the remaining identified villages under Minimum Needs Programe as quickly as possible and to fit up the hand pumps to the remaining successful bore wells.

೧.೦೦ ಪಿ. ಎಂ.

ಶ್ರೀ ಭೀಮಣ್ಣ ಖಂಡ್ರೆ—ಅಧ್ಯಕ್ಷರೇ, ಸರ್ಕಾರ ಕೊಡತಕ್ಕ ಆಶ್ವಾಸನೆ ಬರೀ ಆಶ್ವಾಸನೆ ಆಗಿಯೇ ಇದೆಯೆಂಬುದು ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ. ೧೯೭೩ ರಿಂದ ೭೬ರವರೆಗೆ ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗಿ ಗಂಭೀರವಾದ ಪರಿಸ್ಥಿತಿ ಇದ್ದುದರಿಂದ ಸುಮಾರು ೧೦,೦೦೦ ಜನ ಧರಣಿ ಕೂತಿದ್ದರು. ಈ ವಿಚಾರವನ್ನು ಹೋದವರ್ಷ ನಾನು ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಒಂದು ತಿಂಗಳಲ್ಲಿ ಸರಿಪಡಿಸುತ್ತೇನೆಂದು ಹೇಳಿದರು. ಕುಡಿಯುವ ನೀರನ್ನು ಒದಗಿಸಲಿಕ್ಕಾಗಿ ಸುಮಾರು ೧ ಲಕ್ಷ ೨೦ ಸಾವಿರ ರೂಪಾಯಿಗಳನ್ನು ತಾಲೂಕು ಬೋರ್ಡಿನವರು ಖರ್ಚು ಮಾಡುವುದಕ್ಕಾಗುತ್ತದೆಯೇ ? ಸರ್ಕಾರದವರು ೬೦ ಸಾವಿರ ರೂಪಾಯಿ ರೀಇಂಬರ್ಸ್‌ಮೆಂಟ್ ಮಾಡಿಲ್ಲ. ಸ್ವಾಮಿ, ತಾಲೂಕು ಬೋರ್ಡಿನಲ್ಲಿ ದುಡ್ಡಿಲ್ಲದೆ ಭಿಕ್ಷೆ ಬೇಡುತ್ತಿದ್ದಾರೆ. ೬೦ ಸಾವಿರ ರೂಪಾಯಿ ಇನ್ನೂ ಪೆಂಡಿಂಗ್ ಇದೆ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿರುವುದರಿಂದ ದುಡ್ಡನ್ನು ಕೂಡಲೇ ರೀಎಂಬಾರ್ಸ್‌ಮೆಂಟ್ ಮಾಡಿ ಜನಗಳಿಗೆ ಆಗಿರತಕ್ಕ ತೊಂದರೆಯನ್ನು ಪರಿಹಾರ ಮಾಡುತ್ತೀರಾ ? ತಾವು ನೀಡಿರತಕ್ಕ ಹೇಳಿಕೆ ಸತ್ಯಕ್ಕೆ ದೂರವಾಗಿದೆ. ೭೩-೭೪ರಲ್ಲಿ ಏನು ಕೆಲಸವಾಗಿತ್ತೋ ಅಷ್ಟೇ ಕೆಲಸವಾಗಿದೆ. ೬೭ ಬಾವಿಗಳಲ್ಲೂ ನೀರು ಇಲ್ಲ. ಎಲ್ಲಾ ಕೇಸುಗಳು ಪೆಂಡಿಂಗ್ ಇದೆ ಎಂದು ಹೇಳಿದ್ದೀರಿ. ಹಾಲಿ ಇರತಕ್ಕ ಬಾವಿಗಳನ್ನು ಆಳ ಮಾಡಿದರೂ ನೀರು ಬರುವುದಿಲ್ಲ, ಇಂಥ ಪರಿಸ್ಥಿತಿ ಇದೆ. ಆದುದರಿಂದ ಹೊಸ ಬಾವಿಗಳಿಗೆ ಆರ್ಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್—ಕೆಲವು ಸಂದರ್ಭಗಳಲ್ಲಿ ಇರುವ ಬಾವಿಗಳನ್ನು ಆಳ ಮಾಡಿಸುವುದರಿಂದ ನೀರು ಬರುತ್ತೆ. ತಾವು ಹೇಳಿದ ಪ್ರಕಾರ ನೀರು ಬರದೇ ಇರತಕ್ಕ ಸಂದರ್ಭದಲ್ಲಿ ಹೊಸದಾಗಿ ರಿಗ್ ಹಾಕುವುದು ಅಥವಾ ಬಾವಿ ತೋಡಿಸುವುದಕ್ಕೆ ಸೂಚನೆ ಇದೆ.

ಶ್ರೀ ಭೀಮಣ್ಣ ಖಂಡ್ರೆ—ಆಳ ಮಾಡುವುದರಲ್ಲಿ ನೀರು ಇಲ್ಲ, ಹೊಸ ಬಾವಿಗಳನ್ನು ತೋಡಿಸುವ ಸಲುವಾಗಿ ಆರ್ಡರ್ ಮಾಡಿ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಿ.

ಶ್ರೀ ಕೆ. ಪ್ರಭಾಕರ್—ತಮ್ಮ ಸಲಹೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಗ್ಯವಾದುದಾಗಿದೆ.

MR. SPEAKER—Next Sri Manik Rao Patil to call attention of the C.M. but he is absent.

Matter under rule 312

re : Boycotting of Harijans by caste Hindus in Katral village of Bijapur Taluk.

SRI S.S. ARAKERI (Ballolli)-Sir, I raise a matter under rule 312 regarding boycotting of Harijans of Katral village, Bijapur Taluk by the caste Hindus of the said villages and giving protection to them.

† SRI D. DEVARAJ URS (Chief Minister)—'Urus' at Moulanasab Darga at Kartal was celebrated on 3-4-79. One Shri Kallappa, a

Harijan was found moving bare-headed during the 'Urus' and this was resented to by the caste Hindus, since it was considered not proper to move about during the celebration of the 'Urus' without a head-dress or a head-gear. Then some people persuaded Kallappa to go home to avoid further quarrel and accordingly Shri Kallappa went home. When he was taking food, some caste Hindus led by one Siddaraya Kokatnur trespassed into his house and assaulted him demanding his apology for his behaviour at the Urus'. However, Shri Eshwarappa, the elder brother of Kallappa and other Harijans intervened and pacified the caste Hindus.

On 4-4-1979, a panchayat was held in the village and the harijans were asked to tender an apology to the villagers for the 'behaviour' of Kallappa. Sri Kallappa again refused to apologise. The caste Hindus, in retaliation, imposed a social boycott on the harijans, asking the shop keepers, flour mill owners and others not to render their services to the harijans. The villagers also decided not to engage harijans on daily wages.

On receipt of the information, the Police Sub-Inspector, Babaleshwar Police Station visited the village, took a complaint from the harijans and registered a case in Babaleshwar P.S. Cr. No. 50/79 u/s 147, 148. 323, 504 r/w 149 IPC and 7 P.C.R. Act. Meanwhile the Superintendent of Police deputed the Deputy Superintendent of Police with a police party to visit the village to take up immediate action. Due to the intervention of the Police, the social boycott was immediately lifted. The Police rounded up in all 22 accused persons including the Vice-Chairman of the Panchayat, the Dalapathi of the Village and the President and the Secretary of the Village Co-operative Society on 5-4-1979 and sent them to the Court with a request to remand them to judicial custody. The accused were however, enlarged on bail by the court.

The Superintending of Police, Bijapur, visited Katral on 6-4-1979 and spoke to the Harijans and encouraged them to defy social boycott and to attend to their normal work. The Superintendent of Police issued a show-cause notice to the Dalapathy for his removal. The Deputy Commissioner was addressed to suspend the Vice-Chairman. The Deputy Registrar of Co-operative Societies was also addressed to take similar action against the President and the Secretary of the Co-operative Society, who are the accused in this case.

It is reported that the presence of the Police party at the village and the prompt and suitable action by the police has improved th morale of the Harijans of Katral village and the neighbourhood and

that the Harijans are attending to their normal work without fear and that there is no tension either in Katral village or the neighbouring villages.

It is further reported that the police have maintained a strict vigil in the village. Regarding the action that was to be taken by the Deputy Commissioner and the Deputy Registrar of Co-operative Societies against the Vice-Chairman and the President and Secretary of the Society, respectively, I was trying to get the information whether action has been taken by the Deputy Commissioner to suspend them. I have not been able to get the information immediately. Nevertheless, if action is taken, well and good. If action has not been taken, I have given instructions to take action. Another information is that investigation of the case was completed and chargesheet placed against 24 persons on 11-4-1979 in the Court of Judicial Magistrate II Class, Bijapur.

(*ii*) *re : Non-payment of Compensation to agrieved family of the deceased due to elephant Menace in Arasal Range Shimoga District in 1974-75.*

† ಎಸ್, ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ)— ಮಾನ್ಯ ಅಧ್ಯಕ್ಷರೇ. ೧೯೭೪-೭೫ನೇ ಸಾಲಿನಲ್ಲಿ ಅರಸಾಳು ರೇಂಜಿನಲ್ಲಿ ಕಾಡಾನೆ ಹಾವಳಿಯಿಂದ ಮೂರು ಸಾವುಗಳಾಗಿವೆ. ಒಬ್ಬನನ್ನು ಕಾಲಿನಲ್ಲಿ ತುಳಿದೂ ತುಳಿದೂ ಸಾಯಿಸಿದ್ದರೆ. ಗದ್ದೆ ಕಾಯುತ್ತಿದ್ದ ಇನ್ನೊಬ್ಬನನ್ನು ಕಾಲಿನಲ್ಲಿ ಮೆಟ್ಟಿ ಮೆಟ್ಟಿ ತುಳಿದು ಸಾಯಿಸಿದೆ. ಈ ದಾರುಣ ಪರಿಸ್ಥಿತಿಯನ್ನು ನಾನು ಆಗ ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತಂದಾಗ, ಅವರಿಗೆ ಪರಿಹಾರ ಧನ ಮಂಜೂರ್ಮಾಡಲಾಗಿದೆ ಎಂದು ತಿಳಿಸಿದ್ದರು. ಆದರೆ ಇವತ್ತಿನ ವರೆಗೂ ಅವರಿಗೆ ಪರಿಹಾರ ಸಂದಾಯವಾಗಿಲ್ಲ. ಸುಮಾರು ೨೦ ವರ್ಷದ ಒಬ್ಬನೇ ಮಗನನ್ನು ಕಾಡಾನೆ ತುಳಿದು ಸಾಯಿಸಿರುವುದರಿಂದ, ಮಗನನ್ನು ಕಳೆದುಕೊಂಡ ದಂಪತಿಗಳಿಗೆ ಇಂದು ಯಾರೂ ಗತಿ ಇಲ್ಲದಂತಾಗಿದೆ, ಆದುದರಿಂದ, ಅವರ ಬಾಳಿನಲ್ಲಿ ಕಣ್ಣೀರನ್ನೊರೆಸುವ ಸಲುವಾಗಿ ಪರಿಹಾರ ಕೊಡಬೇಕೆಂದು ನಾನು ನಿಯಮ ೩೧೨ರ ಕೆಳಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು)— ೧೯೭೪-೭೫ರಲ್ಲಿ, ಅರಸಾಳು ರೇಂಜಿನಲ್ಲಿ ಕಾಡಾನೆ ಹಾವಳಿಯಿಂದ ಮೂರು ಜನ ವ್ಯಕ್ತಿಗಳು ಸಾವಿಗೀಡಾದ ಸಂಗತಿ ನಿಜ. ಅರಸಾಳು ಬಳಿಯಲ್ಲಿ ಒಬ್ಬರು, ಅರಸಾಳು ಬಳಿಯಿರುವ ಚಿನ್ನಿಕಾನೆಯಲ್ಲಿ ಇನ್ನೊಬ್ಬರು ಹಾಗೂ ಅರಸಾಳು ರೇಂಜಿನ ಬಳಿ ಇರುವ ಸಂಡೂರಿನಲ್ಲಿ ಮತ್ತೊಬ್ಬರು ಸಾವಿಗೀಡಾದರು. ೧೯೭೪-೭೫ನೇ ಸಾಲಿನಲ್ಲಿ ಇಂಥ ಪ್ರಕರಣಗಳಲ್ಲಿ ಪರಿಹಾರ ನೀಡುವ ಏರ್ಪಾಟು ಇಲ್ಲದ್ದರಿಂದ ಅರಣ್ಯ ಇಲಾಖೆಯು ಸಾವಿಗೀಡಾದ ವ್ಯಕ್ತಿಗಳ ಕುಟುಂಬದವರಿಗೆ ಯಾವ ಪರಿಹಾರವನ್ನೂ ನೀಡಲಿಲ್ಲ. ಕಾಡಾನೆ ಹಾವಳಿಯಿಂದ ವ್ಯಕ್ತಿಗಳು ಸಾವಿಗೀಡಾದ ಪ್ರಕರಣಗಳಲ್ಲಿ, ಆ ಕುರಿತು ಸಂಬಂಧಪಟ್ಟ ಅಸಿಸ್ಟೆಂಟ್ ಸರ್ಜನ್ ಅಥವಾ ಡಿಸ್ಪೆನ್ಸರಿ ಸರ್ಜನ್‌ರವರು ನೀಡಿದ ಶವ ಪರೀಕ್ಷಾ ವರದಿಯ ಆಧಾರದ ಮೇಲೆ ಆ ಪ್ರಕರಣವು ನಿಜವಾದುದೆಂದು ಅರಣ್ಯ ಸಂರಕ್ಷಣಾಧಿಕಾರಿಗೆ ಮನವರಿಕೆಯಾದರೆ, ಪರಿಹಾರವನ್ನು ಸಂದಾಯ ಮಾಡಬಹುದೆಂದು ೧೯೭೮ರ ಅಕ್ಟೋಬರ್ ತಿಂಗಳಿನಲ್ಲಿ ಸರ್ಕಾರದವರು ಆದೇಶ ಹೊರಡಿಸಿದ್ದಾರೆ. ಈಗಿನ ನಿಯಮಗಳ ಪ್ರಕಾರ ಕಾಡಾನೆಗಳ ಹಾವಳಿಯಿಂದ ಸಾವಿಗೀಡಾದ ವ್ಯಕ್ತಿಗಳ ಕುಟುಂಬದವರಿಗೆ ಅಥವಾ ಕಾನೂನು ಸಮ್ಮತ ವಾರಸುದಾರರಿಗೆ ೨,೦೦೦ ರೂಪಾಯಿಯವರೆಗೆ ಪರಿಹಾರವನ್ನು ಸಂದಾಯ ಮಾಡಲಾಗುವುದು.